# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2021-22ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ನೀಡಿರುವ ಅನುದಾನದಲ್ಲಿ ಮೂರನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:-**

1. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 2021, ದಿನಾಂಕ: 30.09.2021.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಪತ್ರ ಸಂಖ್ಯೆ:ಹಿಂವಕಇ/ಲೆಶಾ/ಸಿಆರ್-1/2021-22, ದಿನಾಂಕ:16.10.2021.
3. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಕ್ರಾ.ವೀ.ಸಂ.ರಾ.ಕ್ಷೇ.ಅ.ಪ್ರಾ/ಲೆಕ್ಕ/2021-22/41, ದಿನಾಂಕ: 04.10.2021.
4. ಸರ್ಕಾರದ ಆದೇಶ ಸಂಖ್ಯೆ:ಹಿಂವಕ 339 ಬಿಎಂಎಸ್ 2021 ದಿನಾಂಕ:22.04.2021, 02.06.2021, 17.06.2021 ಮತ್ತು 16.07.2021.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆರ್ಥಿಕ ಇಲಾಖೆಯ ಆದೇಶದಲ್ಲಿ 2021-22ನೇ ಸಾಲಿನಲ್ಲಿ ಮೂರನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)&(3) ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಮತ್ತು ಆಯುಕ್ತರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಇವರು 2021-22 ನೇ ಸಾಲಿನ ಅಯವ್ಯಯದಲ್ಲಿ ಇಲಾಖೆಯ ವಿವಿಧ ಯೋಜನೆಯಡಿ ಒದಗಿಸಿರುವ ಅನುದಾನದಲ್ಲಿ ಮೂರನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ 2021-22ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಯ ವಿವಿಧ ಯೋಜನೆಯಡಿ ಒದಗಿಸಿರುವ ಅನುದಾನದಲ್ಲಿ ಮೊದಲನೇ ಹಾಗೂ ಎರಡನೇ ತ್ರೈಮಾಸಿಕ ಕಂತಿನ ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದೆ. ಪ್ರಸ್ತುತ ಕಾರ್ಯಕ್ರಮಗಳ ಅನುಷ್ಠಾನದ ಹಿನ್ನೆಲೆಯಲ್ಲಿ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೂರನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡಲು ತೀರ್ಮಾನಿಸಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 339 ಬಿಎಂಎಸ್ 2021, ಬೆಂಗಳೂರು, ದಿನಾಂಕ: 30-10-2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಹಿಂದುಳಿದ

..2

30/10/2021

ವರ್ಗಗಳ ಆಯೋಗ, ಆಯುಕ್ತರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರಿಗೆ 2021-22ನೇ ಸಾಲಿಗೆ ಒದಗಿಸಿರುವ ಆಯವ್ಯಯದಲ್ಲಿ ಮೂರನೇ ತ್ರೈಮಾಸಿಕ ಕಂತಾಗಿ ಶೇ.25ರಷ್ಟು ಅನುದಾನವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

1. <u>ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-</u>

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಕಾರ್ಯಕ್ರಮ/ ಲೆಕ್ಕಶೀರ್ಷಿಕೆ | 2021-22ನೇ ಸಾಲಿಗೆ ಒದಗಿಸಿರುವ ಆಯವ್ಯಯ | ಮೊದಲನೇ ತ್ರೈಮಾಸಿಕ ದಲ್ಲಿ ಬಿಡುಗಡೆ ಮಾಡಿರುವ ಮೊತ್ತ | ಎರಡನೇ ತ್ರೈಮಾಸಿಕ ದಲ್ಲಿ ಬಿಡುಗಡೆ ಮಾಡಿರುವ ಮೊತ್ತ | ಮೂರನೇ ತ್ರೈಮಾಸಿಕ ದಲ್ಲಿ ಬಿಡುಗಡೆ ಮಾಡಿರುವ ಮೊತ್ತ |
|---|---|---|---|---|---|
| 1 | **ನಿರ್ದೇಶನ ಮತ್ತು ಆಡಳಿತ 2225-03-001-0-01** | | | | |
| | ವೇತನ ಅಧಿಕಾರಿಗಳ ಅಬ್ಜೆಕ್ಟಿವ್ ಕೋಡ್ -002 | 99.00 | 24.75 | 24.75 | 24.75 |
| | ವೇತನ-ಸಿಬ್ಬಂದಿ ಅಬ್ಜೆಕ್ಟಿವ್‌ಕೋಡ್-003 | 203.00 | 50.75 | 50.75 | 50.75 |
| | ತುಟ್ಟಿ ಭತ್ಯೆ ಅಬ್ಜೆಕ್ಟಿವ್‌ಕೋಡ್-011 | 75.00 | 18.75 | 18.75 | 18.75 |
| | ಇತರೆ ಭತ್ಯೆ ಅಬ್ಜೆಕ್ಟಿವ್‌ಕೋಡ್-014 | 79.00 | 19.75 | 19.75 | 19.75 |
| | ಪೂರಕ ವೆಚ್ಚಗಳು ಆಬ್ಜೆಕ್ಟೀವ್ ಕೋಡ್-015 | 4.00 | 1.00 | 1.00 | 1.00 |
| | ವೈದ್ಯಕೀಯ ಭತ್ಯೆ ಅಬ್ಜೆಕ್ಟಿವ್‌ಕೋಡ್-020 | 2.00 | 0.50 | 0.50 | 0.50 |
| | ವೈದ್ಯಕೀಯ ವೆಚ್ಚದ ಮರುಪಾವತಿ ಅಬ್ಜೆಕ್ಟಿವ್‌ಕೋಡ್-021 | 15.00 | 3.75 | 3.75 | 3.75 |
| | ಪ್ರಯಾಣ ವೆಚ್ಚಗಳು ಅಬ್ಜೆಕ್ಟಿವ್ ಕೋಡ್-041 | 5.00 | 1.25 | 1.25 | 1.25 |
| | ಸಾಮಾನ್ಯ ವೆಚ್ಚಗಳು ಅಬ್ಜೆಕ್ಟಿವ್ ಕೋಡ್-051 | 13.00 | 3.25 | 3.25 | 3.25 |
| | ದೂರವಾಣಿ ವೆಚ್ಚಗಳು ಅಬ್ಜೆಕ್ಟಿವ್ ಕೋಡ್-052 | 2.00 | 0.50 | 0.50 | 0.50 |
| | ಕಟ್ಟಡ ವೆಚ್ಚಗಳು ಅಬ್ಜೆಕ್ಟಿವ್‌ಕೋಡ್-071 | 17.00 | 4.25 | 4.25 | 4.25 |
| | ಸಾರಿಗೆ ವೆಚ್ಚಗಳು ಅಬ್ಜೆಕ್ಟಿವ್‌ಕೋಡ್-195 | 16.00 | 4.00 | 4.00 | 4.00 |
| | ಒಟ್ಟು | **530.00** | **132.50** | **132.50** | **132.50** |

ಶ್ರೀ- 30/10/2021

--3